# ಭಾಗ 3:

## ಅಂತಿಮ ಸ್ಥಿತಿ

ಭಾಗ 1ರಲ್ಲಿ ನಮ್ಮ ಇಂದಿನ ಸ್ಥಿತಿಯನ್ನು, ಮರಣದಲ್ಲಿ ನಮಗೆ ಏನು ಸಂಭವಿಸುತ್ತದೆ ಎಂಬುದನ್ನು ಹಾಗೂ ಮರಣ ಮತ್ತು ಪುನರುತ್ಥಾನ ಮಧ್ಯದಲ್ಲಿ ಮಧ್ಯಮ ಸ್ಥಿತಿಯ ಸ್ವರೂಪವನ್ನು ಅಧ್ಯಯನ ಮಾಡಿದ್ದೇವೆ. ಭಾಗ 2ರಲ್ಲಿ ಯೇಸುವು ಹಿಂದಿರುಗಿ ಬರುವಾಗ ಸಂಭವಿಸುವ ಘಟನೆಗಳ ಅಧ್ಯಯನ ಮಾಡಿದ್ದೇವೆ. ಈ ಅಂತಿಮ ಭಾಗದ ಚಿಂತನೆಯು ನ್ಯಾಯ ತೀರ್ವಿಕೆಯ ದಿನದ ನಂತರ ನಮ್ಮ ಬಹುಮಾನದ ಇಲ್ಲವೇ ದಂಡನೆಯ ಸ್ವಭಾವ ಮತ್ತು ಅವಧಿ ಆಗಿರುತ್ತದೆ. “ನಿತ್ಯವಾದ” ಎಂಬ ಮಾತಿನಿಂದ ಯಾವ ಅರ್ಥವಾಗುತ್ತದೆ? ನೀತಿವಂತರು ಎಷ್ಟರ ತನಕ ಆಶೀರ್ವಾದಿಸಲ್ಪಡುವರು ಮತ್ತು ದುಷ್ಟರು ಎಲ್ಲಿಯ ತನಕ ದಂಡಿಸಲ್ಪಡುವರು? ದೇವರ ಮನಸ್ಸನ್ನು ತಿಳಿಯುವದಕ್ಕೆ ನಮಗೆ ಒಂದೇ ಒಂದು ಮಾರ್ಗವು ಆತನು ಪ್ರಕಟಿಸಿದ್ದರ ಮೇಲೆ ಅವಲಂಬಿಸುವುದು “… ಮನುಷ್ಯನ ಒಳಗಿರುವ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವುದು? ಹಾಗೆಯೇ ದೇವರ ಅಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಿದು ಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ” (1 ಕೊರಿಂಥ 2:9-13; RSV). ಪ್ರಕಟನೆ ಯಿಲ್ಲದೆ ಮನುಷ್ಯನ ಅಂತಿಮ ಸ್ಥಿತಿಯನ್ನು ಕುರಿತು ನಾವು ಸಂಪೂರ್ಣವಾಗಿ ಕತ್ತಲೆಯಲ್ಲಿ ಇರುತ್ತೇವೆ.

ಈ ಭಾಗದಲ್ಲಿ ನಮ್ಮ ಭೌತಿಕ ವಿಶ್ವವು ಕಾಣೆಯಾಗಿಹೋದ ತರುವಾಯ ನಮ್ಮ ಆತ್ಮಿಕ ಆಯಾಮದಲ್ಲಿ ನಮ್ಮ ಅಸ್ತಿತ್ವದ ಬಗ್ಗೆ ಅಧ್ಯಯನ ಮಾಡುತ್ತೇವೆ. ಇಲ್ಲಿ ಆಹ್ವಾನವು ಉದ್ಭವಿಸುತ್ತದೆ. ಆತ್ಮಿಕ ಲೋಕದೊಳಗೆ ಅತೀ ಚಿಕ್ಕ ನೋಟವನ್ನು ಎಂದೂ ಕಾಣದ ನಾವು ಆ ಲೋಕವನ್ನು ನಾವು ಹೇಗೆ ಅರ್ಥಮಾಡಿ ಕೊಳ್ಳ ಬಹುದು? ಆತ್ಮಿಕ ಆಯಾಮದ ಸ್ವರೂಪವನ್ನು ನಮಗೆ ತಿಳಿಸಲು ದೇವರು ಭೌತಿಕ ಮಾತುಗಳನ್ನೂ ಸಂಕೇತಗಳನ್ನೂ ಉಪಯೋಗಿಸಿದ್ದಾನೆ. ಅಂಥ ವಿಶೇಷ ಪದಗಳನ್ನು ಅಪಾರ್ಥ ಮಾಡಿಕೊಳ್ಳದಂತೆ ಜಾಗರೂಕರಾಗಿರ ತಕ್ಕದ್ದು.

© 2009 Truth for Today